
# ಮತ್ಸ್ಯಕನ್ಯೆಯ ನಗರಿ

**ಇದೊಂದು ಸಂಪದ್ಭರಿತ ಶ್ರೀಮಂತ ನಗರ. ಆದರೆ ಇಲ್ಲಿಯ ರಾಜವಾಹನ ಸೈಕಲ್! ಇಲ್ಲಿನ ಮುಖ್ಯ ವ್ಯಾಪಾರೀ ಕೇಂದ್ರವಾದ ಸ್ಟ್ರೋಗೆಟ್‌ನಲ್ಲಿ 1962ರಿಂದಲೇ ಮೋಟಾರು ವಾಹನಗಳ ಓಡಾಟವನ್ನು ನಿಷೇಧಿಸಲಾಗಿದೆ!**

ಚಿತ್ರ ಲೇಖನ:
**ವಿ.ಪ್ರದೀಪ್ ಕುಮಾರ್**





ಕೊಪೆನ್ ಹೇಗನ್ ಸುಂದರ ಪರಿಸರ

ದೆಹಲಿಯ ಮಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ ವತಿಯಿಂದ ನಾಲ್ಕು ದಿನಗಳ ಮಟ್ಟಿಗೆ ಡೆನ್ಮಾರ್ಕ್ ಮತ್ತು ನಾರ್ವೆಗೆ ಪ್ರವಾಸ ಮಾಡಲು ಆಹ್ವಾನ ಬಂದದ್ದು ಅನಿರೀಕ್ಷಿತ. ಅಲ್ಲಿಯ ವೀಸಾ ಪಡೆಯಲೂ ಸಾಕಷ್ಟು ಸರ್ಕಸ್ ಮಾಡಬೇಕಾಯಿತು.

ಈ ಪ್ರವಾಸದಲ್ಲಿ ನನ್ನ ಸ್ನೇಹಿತ ನವೀನ್ ಶರ್ಮಾ ಕೂಡಾ ಪ್ರತಿನಿಧಿಯಾಗಿದ್ದರು. ನಾವು ದುಬೈ, ಪ್ಯಾರಿಸ್ ಮೂಲಕ ಕೊಪೆನ್ ಹೇಗನ್‌ಗೆ ಪಯಣಿಸಬೇಕಿತ್ತು. ಪ್ಯಾರಿಸ್ ವಿಮಾನ ನಿಲ್ದಾಣದ ಬಗ್ಗೆ ಗಾಬರಿಯಾಗುವಂತೆಯೇ ನವೀನ್ ವಿವರಿಸಿದ್ದ. ನಾವು ಕೊಪೆನ್ ಹೇಗನ್‌ಗೆ ಹೋಗುವ ಟರ್ಮಿನಲ್ ಬೇರೆ ಮತ್ತು ದೂರ. ಆದ್ದರಿಂದ ತರಾತುರಿಯಿಂದ ನಡೆಯದಿದ್ದರೆ, ವಿಮಾನ ತಪ್ಪುವ ಸಾಧ್ಯತೆಯೇ ಹೆಚ್ಚು ಎಂದು ಆತ ಎಚ್ಚರಿಸಿದ್ದ.

ಅವನ ಎಚ್ಚರ ಮುಂಜಾನೆ ನಿಜವಾಯಿತು. ಪ್ಯಾರಿಸ್‌ನಲ್ಲಿ ಇಮಿಗ್ರೇಷನ್ ಮುಗಿಸಿ ಹೊರಬಂದಾಗ ಕೊಪೆನ್ ಹೇಗನ್ ವಿಮಾನ ಹೊರಡಲು ಕೇವಲ 45 ನಿಮಿಷಗಳಿದ್ದವು. ಜೋರಾಗಿ ಓಡುವಂತೆಯೇ ನಡೆದು, ದೂರದ ಇನ್ನೊಂದು ಟರ್ಮಿನಲ್ ತಲುಪಿ ವಿಮಾನದಲ್ಲಿ ಹೇಗೋ ಕುಳಿತಾಗ ಮನಸ್ಸಿಗೆ ನಿರಾಳ.

ಮುಂಜಾನೆ ಒಂಬತ್ತಕ್ಕೆ ವಿಮಾನದಿಂದ ಕೊಪೆನ್ ಹೇಗನ್ ಪರಿಸರದ ಅದ್ಭುತವಾದ ದೃಶ್ಯ ಕಾಣಿಸಿತು. ಹಸಿರ ಹಾಸಿಗೆಯ ನಡುವೆ ಒಂದಂತಸ್ತಿನ ಕೆಂಪು



ಲಿಟ್ಲ್ ಮರ್ಮೇಡ್

ಸುಂದರ ನಗರ ಕೊಪೆನ್ ಹೇಗನ್



ಹೆಂಚಿನ ತೋಟದ ಮನೆಗಳು; ಪಕ್ಕದಲ್ಲಿಯೇ ಹರಿಯುತ್ತಿದ್ದ ನಿರ್ಮಲವಾದ ತೊರೆಗಳು, ಅಲ್ಲಲ್ಲಿ ಜೋಡಿಸಿ ಇಟ್ಟಂತಿದ್ದ ಬಿಳಿಯ ವಿಂಡ್‌ಮಿಲ್‌ಗಳು! ಮೇಲಿನಿಂದ ನೋಡಿದ ಮೊದಲ ನೋಟಕ್ಕೇ ಇದೊಂದು ವಿಸ್ಮಯಕಾರೀ ಮಾಯಾಲೋಕದಂತೆ ಕಾಣಿಸಿತು.

ಅಲ್ಲಿನ ಪ್ರತಿಷ್ಠಿತ ಹೋಟೆಲ್ ರಾಡಿಸನ್‌ನಲ್ಲಿ ನಮಗೆ ಉಳಿಯುವ ವ್ಯವಸ್ಥೆ ಮಾಡಲಾಗಿತ್ತು. ಸಸ್ಯಾಹಾರಿ ಊಟದ ನಂತರ ನಾನೂ ಮತ್ತು ನವೀನ್ ತಿರುಗಾಡಲು ಹೊರಟೆವು.

ಕೊಪೆನ್ ಹೇಗನ್ ಡೆನ್ಮಾರ್ಕಿನ ರಾಜಧಾನಿ. ಉತ್ತರ ಯೂರೋಪಿನ ಅತ್ಯಂತ ಕ್ರಿಯಾತ್ಮಕ ಮತ್ತು ಪ್ರಗತಿಶೀಲ ನಗರವಿದು. ಪ್ರಾಚೀನ ಕಾಲದಿಂದಲೂ ವ್ಯಾಪಾರಕ್ಕೆ ಹೆಸರುವಾಸಿಯಾಗಿರುವ ಕೊಪೆನ್ ಹೇಗನ್‌ನ ಹೆಸರಿನ ಅರ್ಥವೇ 'ವರ್ತಕರ ಬಂದರು' ಎಂದು! ಇಲ್ಲಿನ ರಾಜವಂಶ ಪ್ರಪಂಚದಲ್ಲೇ ಪುರಾತನವಾದದ್ದು ಎಂದು ಹೆಸರುವಾಸಿಯಾದರೂ, ಈ ನಗರದಲ್ಲೇನೋ ಆಧುನಿಕತೆ ಇದೆ ಎಂಬುದು ಈಗ ಚಾಲ್ತಿಯಲ್ಲಿರುವ ಮಾತು. ಈ ನಗರ ಉನ್ಮಾದಕಾರೀ ಮತ್ತು ಹರೆಯದ ಚೈತನ್ಯದ ಪ್ರತಿಬಿಂಬದಂತಿದೆ. ಈ ಚೈತನ್ಯದ ಸಂಕೇತವೆಂಬಂತೆ ಅಲ್ಲಿ ನೋಡಿದರೆ ಎಲ್ಲೆಲ್ಲೂ ಸೈಕಲ್ ಸವಾರರು.

## ಸೈಕಲ್ ಎಂಬ ರಾಜವಾಹನ

ಪರಿಸರ ಪ್ರೇಮಿ ಕೊಪೆನ್ ಹೇಗನ್‌ನ ರಾಜವಾಹನ ಸೈಕಲ್ ಎಂದರೆ ನಿಜಕ್ಕೂ ನಿಮಗೆ ಆಶ್ಚರ್ಯವಾಗಬಹುದು. ಇಂದಿನ ಆಧುನಿಕ ಯುಗದಲ್ಲಿ, ಅದರಲ್ಲೂ ಪ್ರಗತಿಶೀಲ ನಗರವಾದ ಕೊಪೆನ್ ಹೇಗನ್‌ನಲ್ಲಿ ಅದ್ಹೇಗೆ ಸೈಕಲ್‌ಗೆ ಇಷ್ಟೊಂದು ಮರ್ಯಾದೆ ಸಿಕ್ಕಿದೆ ಎನ್ನುವುದು ಕುತೂಹಲಕರ ವಿಷಯ. ತನ್ನ ಪರಿಸರವನ್ನು ಮಾಲಿನ್ಯಗಳಿಂದ ಸಂರಕ್ಷಿಸಿ, ಜಗತ್ತಿಗೇ ಮಾದರಿಯಾಗಿರುವ ಕೊಪೆನ್ ಹೇಗನ್, ಈ ನಿಟ್ಟಿನಲ್ಲಿ ತೆಗೆದುಕೊಂಡಿರುವ ಅನೇಕ ಹೆಜ್ಜೆಗಳಲ್ಲಿ ಸೈಕಲ್ ಬಳಕೆಯೂ ಒಂದು. ಹಾಗಾಗಿಯೇ, ನಮಗೆ ಎಲ್ಲೆಲ್ಲೂ ಸೈಕಲ್ ಸವಾರರು ಕಾಣುತ್ತಿದ್ದು, ಉತ್ಸಾಹದಿಂದ ಸೈಕಲ್‌ಗಳಿಗಾಗಿಯೇ ಮೀಸಲಾಗಿದ್ದ ರಸ್ತೆಯಲ್ಲಿ ಚಲಿಸುತ್ತಿದ್ದರು. ಸುಮಾರು 11 ಲಕ್ಷ ಜನರು ಇರುವ ಶ್ರೀಮಂತ ನಗರ ಕೊಪೆನ್ ಹೇಗನ್ ನಲ್ಲಿ ಶೇಕಡಾ 33ರಷ್ಟು ನಾಗರಿಕರು ತಮ್ಮ ದೈನಂದಿನ ಚಟುವಟಿಕೆಗಳಿಗೆ ಇಲ್ಲಿ ಸೈಕಲ್‌ಗಳನ್ನೇ ಬಳಸುತ್ತಾರೆ! (ನಮ್ಮ ಬೆಂಗಳೂರಿನಲ್ಲೂ ಹೀಗೆ ಮಾಡಿದರೆ ಹೇಗೆ?)

ಹಾಗೆಯೇ ಕೊಪೆನ್ ಹೇಗನ್ ನಮಗೆ ಇನ್ನೊಂದು ವಿಚಾರದಲ್ಲೂ ಅಚ್ಚರಿ ಮೂಡಿಸಿತು. ಈ ಸುಂದರ, ಸುಸಜ್ಜಿತ ನಗರದಲ್ಲಿ ಪ್ರಯಾಣ ಉಚಿತ! ಪ್ರವಾಸಿಗರಿಗೆ ಇಲ್ಲಿ ಉಚಿತ ಸೈಕಲ್‌ಗಳ ವ್ಯವಸ್ಥೆಯಿದೆ. ನೂರಕ್ಕೂ ಹೆಚ್ಚಿನ ನಿಲ್ದಾಣಗಳಲ್ಲಿ ಇರುವ ಈ ಸೈಕಲ್‌ಗಳ ಲಾಕರಿಗೆ 20 ಡಾನಿಶ್ ಕ್ರೋನರ್ (ಸುಮಾರು 170 ರೂಪಾಯಿ)ಗಳನ್ನು ಹಾಕಿ, ನೀವು ಸೈಕಲ್ ಪಡೆಯಬಹುದು. ಉಪಯೋಗದ ನಂತರ, ಆ ಡಿಪಾಸಿಟ್ ಹಣವನ್ನುವಾಪಸ್ ಪಡೆಯಬಹುದು.

ಸೈಕಲ್ ಸವಾರಿ ನಿಮಗೆ ಹಿಡಿಸಲಿಲ್ಲವೋ ಅಥವಾ ಬರುತ್ತಿಲ್ಲವೋ.. ಚಿಂತೆಯಿಲ್ಲ; ನಿಮಗಾಗಿ ಬಸ್, ಮೆಟ್ರೊ, ಟ್ರೈನ್ ಮತ್ತು ಟ್ಯಾಕ್ಸಿ ವ್ಯವಸ್ಥೆಯೂ ಇದೆ.

ಪರಿಸರಕ್ಕೆ ಸಂರಕ್ಷಣೆಗೆ ಸಂಬಂಧಿಸಿದಂತೆ ಕಾರ್ಯತಂತ್ರಗಳನ್ನು ರೂಪಿಸಲು ಸರ್ಕಾರದ ಜೊತೆಗೆ ಕೊಪೆಂಹೆಗೆನ್ ಕ್ಲೈಮೇಟ್ ಕೌನ್ಸಿಲ್ ಸೇರಿದಂತೆ ಅನೇಕ ಸಂಸ್ಥೆಗಳ ಸಹಯೋಗವಿದೆ. ಇಲ್ಲಿನ ಪರಿಸರದಲ್ಲಿ ಕಾರ್ಬನ್ ಪ್ರಮಾಣವನ್ನು 2025ರ ವೇಳೆಗೆ ಕನಿಷ್ಟ ಪ್ರಮಾಣಕ್ಕೆ ತರಲು ಐವತ್ತು ಯೋಜನೆಗಳನ್ನು ರೂಪಿಸಲಾಗಿದೆ. ಇವುಗಳಲ್ಲಿ ಅತಿ ಮುಖ್ಯವಾದ ಯೋಜನೆಗಳೆಂದರೆ:

★ ಹೆಚ್ಚಿನ ಸಂಖ್ಯೆಯಲ್ಲಿ ಗಾಳಿಯಂತ್ರಗಳ ಮತ್ತು ವಿದ್ಯುತ್‌ಶಕ್ತಿಯ ವಾಹನಗಳ ಬಳಕೆ.

★ ವಾಹನಗಳ ಮಾಲಿನ್ಯದ ನಿಯಂತ್ರಣ

★ ನಾಗರಿಕರು ಬಳಸುವ ಇಂಧನದ ಉಳಿತಾಯ.

ಗಾಳಿಯಂತ್ರಗಳ ಬಳಕೆಯಿಂದ ಈಗಾಗಲೇ ದೇಶದ ಶೇಕಡಾ 20ರಷ್ಟು ವಿದ್ಯುತ್





ಲೇಖಕ

ಶಕ್ತಿಯ ಉತ್ಪಾದನೆಯಾಗುತ್ತಿದೆ. ಪರಿಸರ ಸಂಬಂಧಿತ ಇತರ 34 ಯೋಜನೆಗಳು ಕಾರ್ಯಗತವಾಗುತ್ತಿದ್ದು, 2015ಕ್ಕೆ ಶೇಕಡಾ 20ರಷ್ಟು ಕಾರ್ಬನ್ ಕಡಿಮೆಯಾಗುವ ನಿರೀಕ್ಷೆಯಿದೆ.

## ವಾಹನವೇ ಇಲ್ಲದ ಸ್ಟ್ರೋಗೆಟ್

ಪರಿಸರ ಪ್ರೇಮಿ ಕೊಪೆನ್‌ಹೇಗನ್‌ನ ಮುಖ್ಯ ಆಕರ್ಷಣೆ ಇಲ್ಲಿನ ಸ್ಟ್ರೋಗೆಟ್. ಇದು ನಮ್ಮ ಬೆಂಗಳೂರಿನ ಎಮ್.ಜಿ. ರಸ್ತೆಯಂತೆ. ಒಂದು ಲಕ್ಷ ಚದರ ಮೀಟರ್ ಸುತ್ತಳತೆಯ ಸ್ಟ್ರೋಗೆಟ್, ಕೇವಲ ಪಾದಚಾರಿಗಳಿಗೇ ಮೀಸಲಾದ ಬೃಹತ್ ವ್ಯಾಪಾರ ಸ್ಥಳ. ಅಂದರೆ, ಇಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ! ಇವರ ಮುಂದಾಲೋಚನೆ ನಿಜಕ್ಕೂ ಮೆಚ್ಚುವಂತದ್ದು; ಈ ವಾಹನ ನಿಷೇಧವನ್ನು 1962ರಷ್ಟು ಹಿಂದೆಯೇ ಇವರು ಜಾರಿಗೆ ತಂದಿದ್ದಾರೆ.

ಪ್ರತಿನಿತ್ಯ ಸುಮಾರು ಎರಡೂವರೆ ಲಕ್ಷ ಜನರು ಸ್ಟ್ರೋಗೆಟ್‌ನ ಮಳಿಗೆಗಳಿಗೆ ಮತ್ತು ಶಾಪಿಂಗ್ ಮಾಲ್‌ಗಳಿಗೆ ಭೇಟಿ ನೀಡುತ್ತಾರೆ. ಯೂರೋಪಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಲಾ ವಸ್ತುಗಳೂ, ಅಭರಣಗಳೂ, ವಸ್ತ್ರಗಳೂ ಇಲ್ಲಿ ಹೇರಳವಾಗಿವೆ. ವಾಹನಗಳಿಲ್ಲದೆ, ನಿರಾತಂಕವಾಗಿ, ನಿಶ್ಚಿಂತೆಯಿಂದ ಓಡಾಡಬಹುದಾದ ಇಲ್ಲಿನ ಅನುಭವ ನಿಜಕ್ಕೂ ಅಪರೂಪವಾದದ್ದು. ಬೆಮಗಳೂರಿನ ಎಮ್.ಜಿ.ರಸ್ತೆ, ಬ್ರಿಗೇಡ್ ರಸ್ತೆಗಳಲ್ಲಿ ಈ ರೀತಿ ವಾಹನ ಸಂಚಾರವನ್ನು ನಿಷೇಧಿಸಿ, ನಾವೆಲ್ಲಾ ನಿರಾತಂಕವಾಗಿ ಓಡಾಡುವ ಸಮಯ ನಮ್ಮ ಕಾಲದಲ್ಲೇ ಬರಬಹುದೇ ಎನ್ನುವುದೊಂದು ಯಕ್ಷಪ್ರಶ್ನೆ.

## ಲಿಟ್ಲ್ ಮರ್ಮೇಡ್

ಕೊಪೆನ್ ಹೇಗನ್ ಮತ್ಸ್ಯಕನ್ಯೆಯ ನಗರವೂ ಹೌದು. ಅದೊಂದು ದುರಂತ ಕಥೆ. ಅಪಘಾತಕ್ಕೀಡಾದ ಹಡಗಿನಲ್ಲಿ ಪಯಣಿಸುತ್ತಿದ್ದ ಯುವರಾಜನನ್ನು ಬದುಕಿಸಲು ಹೋದ ಮತ್ಸ್ಯಕನ್ಯೆ ಕೊನೆಗೆ ಅವನನ್ನೇ ಪ್ರೀತಿಸತೊಡಗಿದಳು. ಆದರೆ ಅವನ ಪ್ರೀತಿಗಾಗಿ ಅವಳು ನೀಡಿದ ಬೆಲೆ ಅಪಾರ. ಭೂಮಿಯ ಮೇಲಿದ್ದ ಯುವರಾಜನನ್ನು ನೀರಿನಲ್ಲಿ ಇರುತ್ತಿದ್ದ ಮತ್ಸ್ಯಕನ್ಯೆ ಭೇಟಿ ಮಾಡುವುದಾದರೂ ಹೇಗೆ? ಕೊನೆಗೆ ತನ್ನ ಕಂಠ ಮತ್ತು ಮತ್ಸ್ಯಪುಚ್ಛವನ್ನೇ ಮಾಟಗಾತಿಯೊಬ್ಬಳ ಕಾಲುಗಳಿಗೆ ವಿನಿಮಯ ಮಾಡಿಕೊಂಡು ಸಾಗರವನ್ನು ದಾಟಿ ಭೂಮಿಗೆ ಬಂದಳು. ದೇಹದ ಸ್ವರೂಪವನ್ನೇ ಬದಲಾಯಿಸಿಕೊಂಡ ಮತ್ಸ್ಯಕನ್ಯೆಗೆ ಕಾಲುಗಳು ಖಡ್ಗದಂತೆ ಸ್ಪರ್ಶವಾಗಿ, ಹೆಜ್ಜೆ ಹೆಜ್ಜೆಗೂ ತೀವ್ರವಾದ ನೋವನ್ನು ಅನುಭವಿಸುತ್ತಿದ್ದಳು. ಇಷ್ಟೆಲ್ಲಾ ನೋವನ್ನು ಅನುಭವಿಸಿ, ಮಾಡಿದ ತ್ಯಾಗಕ್ಕೆ ಪ್ರತಿಫಲ ಸಿಗದೆ, ಮತ್ಸ್ಯಕನ್ಯೆಗೆ ಯುವರಾಜ ಕೊನೆಗೂ ಸಿಗಲೇ ಇಲ್ಲ.

1913ರಲ್ಲಿ ಎಡ್ವರ್ಡ್ ಎರಿಕ್ಸನ್‌ರಿಂದ ಈ ಪ್ರತಿಮೆಯ ನಿರ್ಮಾಣವಾಯಿತು. ಇದು ಬಿಯರ್ ತಯಾರಿಸುತ್ತಿದ್ದ ಕಾರ್ಲ್ ಜೇಕಬ್ಸನ್, ಕೊಪೆನ್ ಹೇಗನ್‌ಗೆ ನೀಡಿದ ಉಡುಗೊರೆ. ಸಮುದ್ರ ತೀರದಲ್ಲಿ ಅಪಾರವಾದ ಜಲರಾಶಿಯನ್ನು ನಿಟ್ಟಿಸುತ್ತಾ, ತನ್ನ ಬಾಲ್ಯಾವಸ್ಥೆಯನ್ನು ನೆನೆಯುತ್ತಾ, ತನ್ನ ಪ್ರಿಯತಮನಿಗಾಗಿ ಕಾಯುತ್ತಾ ಕುಳಿತಿರುವ ಈ ಪ್ರತಿಮೆಯಲ್ಲಿ ಮತ್ಸ್ಯಕನ್ಯೆಯ ಎರಡೂ ರೂಪಗಳನ್ನು ಅತ್ಯಂತ ಸೂಕ್ತವಾಗಿ, ಸೂಕ್ಷ್ಮವಾಗಿ ಕೆತ್ತಲಾಗಿದೆ.



ಸ್ಟ್ರೋಗೆಟ್

ಇಲ್ಲಿನ ಕಡಲ ತೀರದಲ್ಲಿರುವ ಲಿಟಲ್ ಮರ್ಮೇಡ್‌ನ ಸುಂದರ ಪ್ರತಿಮೆ ಕೊಪೆನ್ ಹೇಗನ್‌ಗೊಂದು ಹೆಗ್ಗಳಿಕೆಯೇ ಸರಿ. ಜನಪ್ರಿಯ ಪ್ರವಾಸೀ ತಾಣವಾಗಿರುವ ಲಿಟಲ್ ಮರ್ಮೇಡ್‌ನ ಪಕ್ಕದಲ್ಲಿ ಭಾವಚಿತ್ರ ತೆಗೆಸಿಕೊಳ್ಳಲು ಕಿರಿಯರಿಂದ ಹಿರಿಯರವರೆಗೂ ನೂಕುನುಗ್ಗಲು. ಲಿಟಲ್ ಮರ್ಮೇಡ್‌ನ ಖಾಸಗೀ ಚಿತ್ರವನ್ನು ನನ್ನ ಕ್ಯಾಮೆರಾದಲ್ಲಿ ಸೆರೆಹಿಡಿಯಲು ಇಪ್ಪತ್ತು ನಿಮಿಷಗಳಾಯಿತು. ಇಂದಿಗೂ ಏಕಾಂಗಿಯಾಗಿ, ಏಕಚಿತ್ತದಲ್ಲಿ ಕಾಯುತ್ತಲಿರುವ ಲಿಟಲ್ ಮರ್ಮೇಡ್‌ನ ಭಂಗಿ, ಅವಿಸ್ಮರಣೀಯ.

ಸುಮಾರು ನೂರು ವರುಷಗಳಿಂದ ಬೇಸತ್ತು ಬಳಲಿದ್ದ ಈ ಮತ್ಸ್ಯಕನ್ಯೆ ಈಗಷ್ಟೇ ಸಂಚರಿಸಲು ಆರಂಭಿಸಿದ್ದಾಳೆ! ಕಳೆದ ನವೆಂಬರ್‌ನಲ್ಲಿ ಚೀನಾ ದೇಶದಲ್ಲಿ ನಡೆದ ವರ್ಲ್ಡ್ ಫೇರ್‌ನಲ್ಲಿ ಡಾನಿಶ್ ಪೆವಿಲಿಯನ್‌ನ ಸಂಕೇತವೆಂಬಂತೆ ಭಾಗವಹಿಸಿದ್ದ ಈ ಮತ್ಸ್ಯಕನ್ಯೆ, ಮತ್ತೆ ಮನೆಗೆ ಹಿಂತಿರುಗಿದ್ದಾಳೆ.

## ಇದು ಪಬ್ ಸಿಟಿ!

ಹಾಂ! ಹೇಳಲು ಮರೆತೆ. ಜಗತ್ತಿನೆಲ್ಲೆಡೆ ಹೆಸರುವಾಸಿಯಾಗಿರುವ ಕಾರ್ಲ್ಸ್‌ಬರ್ಗ್ ಬಿಯರ್ ಇಲ್ಲೇ ತಯಾರಾಗುತ್ತದೆಯಾದ್ದರಿಂದ, ಇದೂ ಸಹ ಬೆಂಗಳೂರಿನಂತೆ ಪಬ್ ಸಿಟಿ. ಇಲ್ಲಿರುವ ಕಾರ್ಲ್ ಜೇಕಬ್ಸನ್ ನಿರ್ಮಿತ ಸಂಗ್ರಹಾಲಯದಲ್ಲಿ ಬಿಯರ್‌ನ ಚರಿತ್ರೆ ಮತ್ತು ತಂತ್ರಜ್ಞಾನವನ್ನು, ಬೆಳಕು ಮತ್ತು ಶಬ್ದದ ಮುಖಾಂತರ ವಿವರಿಸುವ ವ್ಯವಸ್ಥೆಯಿದೆ. ವಿಶ್ವದಲ್ಲೇ ವ್ಯಾಪಕವಾದ, ವಿಶೇಷವಾದ ಬಾಟಲ್‌ಗಳ ಸಂಗ್ರಹವನ್ನೂ ವೀಕ್ಷಿಸಬಹುದು. ಅಷ್ಟೇ ಅಲ್ಲ; ಬಿಯರ್ ಪ್ರಿಯರಿಗೆ ಇಲ್ಲಿನ ಜೇಕಬ್ಸನ್ ಬ್ರಿವರಿಯಲ್ಲಿ ಉತ್ಪಾದನಾ ಮಾಹಿತಿಯ ಜೊತೆಗೆ ತಾಜಾ ಬಿಯರ್




ಸವಿಯುವ ಅವಕಾಶವೂ ಉಂಟು.

ಕೊಪೆನ್ ಹೇಗನ್‌ನಲ್ಲಿ ಇನ್ನೊಂದು ವಿಶೇಷವಿದೆ. ಈ ಪಬ್ ಸಿಟಿಯಲ್ಲಿ ಕಾಫಿಗೂ ಅಷ್ಟೇ ಮಹತ್ವವಿದೆ. ಕಾಫಿ ಡೆನ್ಮಾರ್ಕಿನ ರಾಷ್ಟ್ರೀಯ ಪಾನೀಯವಾಗಿದ್ದು, ಸ್ಥಳೀಯ ಸಂಸ್ಕೃತಿಯ ಒಂದು ಪ್ರಮುಖ ಅಂಗ. ಕೊಪೆಂಹೆಗೆನ್‌ನ ಶೇಕಡಾ 98ರಷ್ಟು ಮನೆಗಳಲ್ಲಿ ಕಾಫಿ ಸದಾ ಲಭ್ಯವಂತೆ! ಡೆನ್ಮಾರ್ಕಿನ ಆಹಾರ ಪದ್ಧತಿ ಶೀತವಲಯಕ್ಕೆ ಹತ್ತಿರವಿರುವ ಇಲ್ಲಿನ ಹವಾಮಾನಕ್ಕೆ ತಕ್ಕಂತಿದೆ. ಡೇನಿಶ್ ಪೇಸ್ಟ್ರಿಯಂತೂ ಪ್ರಪಂಚದಾದ್ಯಂತ ಜನಪ್ರಿಯ. ಇಲ್ಲಿ ಬಿಯರ್, ಕಾಫಿಯ ಜೊತೆಗೆ ನಮ್ಮ ತಿಂಡಿ ಊಟಕ್ಕೇನೂ ತೊಂದರೆಯಾಗದು. ಏಕೆಂದರೆ, ಇಪ್ಪತ್ತಕ್ಕಿಂತಲೂ ಹೆಚ್ಚಿನ ಭಾರತೀಯ ಉಪಾಹಾರ ಗೃಹಗಳಿವೆ.

## ಅಪೇರಾ

ಪ್ರವಾಸಿಗರು ನೋಡಲೇಬೇಕಾದ ಕೊಪೆನ್ ಹೇಗನ್‌ನ ಅಪೇರಾ ಯೂರೋಪಿನ ಅಪೇರಾಗಳಲ್ಲೇ ವಿನೂತನ. 2005ರಲ್ಲಿ ಉದ್ಘಾಟನೆಯಾದ ಅಪೇರಾಗೆ ತಗುಲಿದ ವೆಚ್ಚ 2500 ಕೋಟಿ ರೂಪಾಯಿ! ಇಲ್ಲಿ ಮುಖ್ಯ ವೇದಿಕೆಯ ಜೊತೆಗೆ ಹೊಂದಿಕೊಂಡಂತೆ ಇನ್ನೂ ಐದು ವೇದಿಕೆಗಳಿವೆ. ಪ್ರೇಕ್ಷಕರ ಮನತಣಿಸುವ ಅನುಭವಕ್ಕಾಗಿ ಇಲ್ಲಿನ 1492 ಆಸನಗಳನ್ನೂ ವಿಶಿಷ್ಟವಾಗಿ ಸ್ಥಿರಗೊಳಿಸಲಾಗಿದೆ. ಒಂದೇ ಬಾರಿಗೆ 110 ಕಲಾವಿದರ ವಾದ್ಯಗೋಷ್ಠಿ ನಡೆಸಲು ಅನುಕೂಲವಿದ್ದು, ಸಂಗೀತ–ನಾಟ್ಯಕ್ಕೆ ಬೇಕಾದ ಅಸಾಧಾರಣವಾದ ಧ್ವನಿ–ವ್ಯವಸ್ಥೆಯನ್ನೂ ಮಾಡಲಾಗಿದೆ.

ಯೂರೋಪ್ ಚರಿತ್ರೆ, ಸಂಗೀತ, ಸಾಹಿತ್ಯ, ನಾಟಕ, ಕಲೆಗಳ ತವರೂರು. ಹಾಗಾಗಿಯೇ ಕೊಪೆನ್ ಹೇಗನ್‌ನಲ್ಲಿ ಲೂಸಿಯಾನ ಮತ್ತು ಗ್ಲೈಪ್ಟೊಟೆಕ್ ಸೇರಿದಂತೆ ಅನೇಕ ಪ್ರಸಿದ್ಧ ವಸ್ತು ಸಂಗ್ರಹಾಲಯಗಳಿವೆ. ಸಮೀಪದಲ್ಲೇ ರೋಮ್ ನಗರದಲ್ಲಿರುವ ಟ್ರೆವಿ ಕಾರಂಜಿಯಂತೆ, ಇಲ್ಲೂ ನಮ್ಮ ಕೋರಿಕೆಗಳನ್ನು ಪೂರೈಸುವ ಜೆಫ್‌ವೊನ್ ಕಾರಂಜಿಯಿದೆ. ಈ ಕಾರಂಜಿ ಸಹಾ ಬೀರ್ ತಯಾರಕ ಕಾರ್ಲ್ ಜೇಕಬ್ಸನ್ ನಗರಕ್ಕೆ ನೀಡಿದ ಬಳುವಳಿ.

## ಪರಿಸರ ಸಂರಕ್ಷಣೆಯಲ್ಲಿ..

ಬಿಸಿಯಾಗುತ್ತಿರುವ ಪೃಥ್ವಿಯ ಪರಿಣಾಮವಾಗಿ ಪ್ರಕೃತಿ ವಿಕೋಪಗಳ ಇತ್ತೀಚಿನ ಘಟನೆಗಳ ಹಿನ್ನೆಲೆಯಲ್ಲಿ ನಿಸರ್ಗವೇ ಸ್ವರ್ಗವೆಂದು ಪರಿಗಣಿಸಿರುವ ಡೆನ್ಮಾರ್ಕ್, ಪರಿಸರ ಸಂರಕ್ಷಣೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಶ್ಲಾಘನೀಯ ಹಾಗೂ ಅನುಕರಣೀಯ. ಪರಿಸರ ಸಮಸ್ಯೆಗಳಿಗೆ ಸ್ಪಂದಿಸಿ ಮತ್ತು ಅವುಗಳ ಪರಿಹಾರಕ್ಕೆ ಒಂದಾಗಿರುವ ದೇಶಗಳ ಮುಂಚೂಣಿಯಲ್ಲಿದೆ ಡೆನ್ಮಾರ್ಕ್. ಹಾಗಾಗಿ ಬಿಸಿಯಾಗುತ್ತಿರುವ ಪೃಥ್ವಿ ಮತ್ತು ಪರಿಸರದ ಎಲ್ಲಾ ಚರ್ಚೆ, ಕಾರ್ಯಾಚರಣೆಗಳ ಕೇಂದ್ರಬಿಂದುವಾಗಿ ಕೊಪೆನ್ ಹೇಗನ್ ಬೆಳೆದಿದೆ. ಈ ನಿಟ್ಟಿನಲ್ಲಿ ಕೊಪೆನ್ ಹೇಗನ್ ಕ್ಲೈಮೇಟ್ ಕೌನ್ಸಿಲ್ ಮತ್ತು ವಿಶ್ವಸಂಸ್ಥೆ ಸಂಯೋಜಿತ ಕ್ಲೈಮೇಟ್ ಸಮಾವೇಶ 2009ರ ಡಿಸೆಂಬರ್‌ನಲ್ಲಿ ನಡೆದು ಹಲವು ಮಹತ್ತರ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಪರಿಸರವನ್ನು ಕಾಪಾಡುವ ನಿಮಿತ್ತದ ಪ್ರಯತ್ನಗಳು ಫಲಕಾರಿಯಾಗುವ ಎಲ್ಲಾ ಲಕ್ಷಣಗಳು ಈಗಾಗಲೇ ಇಲ್ಲಿ ಕಾಣುತ್ತಿದೆ. 2008ರಲ್ಲಿ 'ಮೊನೊಕ್ಲೆ' ಎಂಬ ಲಂಡನ್ ಪತ್ರಿಕೆ, ಮಾನವ ಸಮುದಾಯ ಜೀವಿಸಲು, ಪ್ರಪಂಚದ ಇಪ್ಪತ್ತು ಶ್ರೇಷ್ಠ ನಗರಗಳ ಪಟ್ಟಿಯನ್ನು ಮಾಡಿದಾಗ, ಅದರಲ್ಲಿ ಅಗ್ರ ಸ್ಥಾನವನ್ನು ಕೊಪೆನ್ ಹೇಗನ್‌ಗೆ ನೀಡಿದ್ದು, 'ಜಗತ್ತಿನಲ್ಲೇ ಅತ್ಯಂತ ಉತ್ಕೃಷ್ಟವಾಗಿ ರೂಪಿಸಲಾದ ನಗರ' ಎಂಬ ಬಿರುದನ್ನೂ ನೀಡಿದೆ.

ಆಧುನೀಕರಣದ ಮಾಲಿನ್ಯದಿಂದ ಮುಕ್ತವಾದ ಸ್ವಚ್ಛ ಗಾಳಿ, ಎಲ್ಲೆಲ್ಲೂ ಹಚ್ಚಹಸಿರಾದ ಗಿಡಮರಗಳು, ವಿಶಾಲವಾದ ಸಮುದ್ರದ ನಡುವೆ, ಆಕಾಶವನ್ನೇ ಚುಂಬಿಸುತ್ತಿರುವಂತೆ ಕಾಣುವ ಹಿಮದ ಶ್ವೇತಪರ್ವತಗಳ ಈ ನಾಡಿಗೆ ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರು ಬರುತ್ತಾರೆ. ನೀವು ಇನ್ನೂ ಹೋಗಿಲ್ವೆ!